(8) ಬಳ್ಳಿಕಾಲುಂಗರ ಜೊತೆ 1ಕ್ಕೆ	..	..	8	0 0
(9) ತರಹೇವಾದ ದೇಶಿಕುಪಸದ ಖಿಣಗಳು 6ಕ್ಕೆ	..	..	5	0 0
		ಜುಮ್ಲಾ	348	0 0

ತಾರೀಖು 5—3—1890ನೇ ಇಸವಿ ಬೆಂಗಳೂರು

ಸಿ. ಆರ್ಡಿ,
ರೈಲ್ವೆ ಪೊಲೀಸ್ ಆ|| ಕಮ್ಮಿಷನರ್.

ಕೋಲಾರ ಡಿಸ್ಟ್ರಿಕ್ಟ್.

ತಾರೀಖು 9ನೇ ಮಾರ್ಚಿ 1890.

ಇಸ್ತಿಹಾರ್‌ನಾಮೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದಿರಡಿ ನಮೂದಾಗುವ ತಾಲ್ಲೂಕುಗಳಲ್ಲಿ ಕುರಂಗದ ಕಲ್ಲು ಜಮಾಯಿಸತಕ್ಕ ಹಕ್ಕನ್ನು 1890ನೇ ಇಸವಿ ಮಾರ್ಚಿ ತಾರೀಖು 31ರಲ್ಲಾ ಆಯಾಯ ತಾಲ್ಲೂಕು ಕಚೇರಿಯಲ್ಲಿ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ಹರಾಜು ದಿವಿ 11 ಘಂಟೆಗೆ ಆರಂಭಿಸಲ್ಪಡುವದು.

ಬವರಿಂಗ್‌ಪೇಟೆ, ಶಿಡ್ಲಘಟ್ಟ, ಗೋರೀಬಿದನೂರು.

2. ಅಮಲ್‌ದಾರ್ರು ಅಥವಾ ಶಿರಸ್ತೇದಾರ್ರು ಹರಾಜು ಮಾಡಿಸುತ್ತಾರೆ.
3. ಚಡ ಸವಾಲ್ ಅಂಗೀಕರಿಸತಕ್ಕದ್ದು ಮೈಸೂರು ದಿವಾ ಸಾಹೆಬರವರ ಮಂಜೂರಾತಿಗೆ ವಳಪಟ್ಟು ಯಿರುತ್ತೆ.
4. ಇಜಾರೆ 1891ನೇ ಇಸವಿ ಮಾರ್ಚಿ 31ನೇ ತಾರೀಖಿನ ವರಿಗೆ ಜಾರೀಲಿ ಯಿರುವದು.
5. ಹರಾಜ್ ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಸೀಕು, ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡದುಕೊಂಡಿರುವ ಅಧಿಕಾರ ಪತ್ರಿಕೆ ಹಾಜರ್ಮಾಡಸೀಕು, ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.
6. ಚಡ ಸವಾಲ್‌ದಾರನು ಹರಾಜ್ ಕಾಲದಲ್ಲಿ ತನ್ನ ಸವಾಲ್ ಮೊಬಲಗು ಪೈಕಿ ಕೀಕಡಾ 25 ರೂಪಾಯಿಗಳ ಮೇರೆ ಡಿಪಾಜಿಟ್ ಹಾಜರ್ಮಾಡಬೇಕು. ಹರಾಜು ಮಂಜೂರಾದ ಸಂಗತಿ ಅಮಲ್‌ದಾರ್ರಿಂದ ತಿಳಿಸಲ್ಪಟ್ಟ ಲಾಗಾಯ್ತು 7 ದಿವಸಗಳ ವಳಗಾಗಿ ಬಾಕಿ ಮೊಬಲಗನ್ನು ಮತ್ತು ಚಡ ಸವಾಲ್ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 1 ಅಣೆ ಮೇರಿಗೆ ಲೋಕಲ್‌ಸೆಸ್ ಸಹ ಹಾಜರ್ಮಾಡಬೇಕು, ಇದಕ್ಕೆ ತಪ್ಪಿದರೆ ಹಾಜರ್ಮಾಡಿದ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ಕೈರಿಸಿಕೊಳ್ಳಲ್ಪಡುವದು, ಡಿಪಾಜಿಟ್ ಹಾಜರ್ಮಾಡದೆ ಯಿದ್ದಾಗ್ಯೂ ಅಥವಾ ಬಾಕಿ ಮೊಬಲಗು ಪಾವತಿ ಮಾಡದೆ ಯಿದ್ದಾಗ್ಯೂ ಈ ಬಾಬು ಪುನಹ ಹರಾಜ್ ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲ ಚಡ ಸವಾಲ್‌ದಾರನು ಗುರಿಮಾಡಲ್ಪಡುವದು.
7. ಇಜಾರೆದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ಆಯಾಯ ಹಿಡುವಳಿದಾರ್ರ ಅನುಮತಿ ವಿನಹಾ ಅರಿಸಿಕೊಳ್ಳಕೂಡದು. ತಮ್ಮ ಹಿಡುವಳಿ ಜಮೀನಿನಲ್ಲಿರತಕ್ಕ ಕಲ್ಲುಗಳು ಜಮಾಯಿಸಿಕೊಳ್ಳುವದಕ್ಕಾಗಲಿ ಅಥವಾ ಇಜಾರೆದಾರ ವಿನಹಾ ಇತರರಿಗೆ ಮಾರುವದಕ್ಕೆ ಆಗಲಿ ಹಿಡುವಳಿದಾರ್ರಿಗೆ ಅಧಿಕಾರ ವಿರುವದಿಲ್ಲ.
8. ಇಜಾರೆದಾರನು ಹುಲ್ಲುಬನ್ನಿ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆಟಂಕ ಪಡಿಸಕೂಡದು.
9. ಹಿಡುವಳೀಲಿ ಯಿಲ್ಲದ ಜಮೀನುಗಳನ್ನ ಸರ್ಕಾದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರವೇನೂ ಯಿರುವದಿಲ್ಲ, ಪರಂತು ಅಂಥಾ ಜಮೀನುಗಳಲ್ಲಿ ಕಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕ್ಕೊಳ್ಳಲು ಅವನಿಗೆ ಹಕ್ಕು ಯಿರುತ್ತೆ.
10. ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನುಗಳನ್ನ ಇಜಾರೆದಾರನು ಆಗಿಯಕೂಡದು, ಬಂದು ವ್ಯಾಳೆ ಆಗದರೆ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಪಡಿಸಬೇಕು.

ಯೆ. ಕುಪ್ಪುಸಾಮಿ ಮೊದಲಿಯಾರ್,
ಫಾರ್ ಡೆಪ್ಯೂಟಿ ಕಮ್ಮಿಷನರ್.

ತುಮಕೂರು ಡಿವೀರ್ಜ್.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಯಿದರಿಂದ ತಿಳಿಯಪಡಿಸುವದೇನಂದರೆ, ಪಾವಗಡ ತಾಲ್ಲೂಕು ಬೊಮ್ಮಗೋನಹಳ್ಳಿ ತಲಾವು ರಿಪೇರಿ ಕಾಮಗಾರಿಗಾಗಿ ಮೊಹರಾಗಿ ಬರುವ ದರಖಾಸ್ತುಗಳನ್ನು ತುಮಕೂರು ಡಿವೀರ್ಜ್ ಯಗ್ಜಿಕ್ಯೂಟಿವ್ ಇಂಜಿನಿಯರವರ ಆಫಿಸಿನಲ್ಲಿ ಸಾಲ್ ಮಜಕೂರು 1890ನೇ ಇಸವಿ ಮಾರ್ಚಿ ಆಖೈರುವರಿವಿಗೆ ಹಿಡಿಯಲ್ಪಡುವದು.

ಸುಮಾರು ಅಂದಾಜು ಪರಿಮಾಣವನ್ನು. ಈ ಕೆಳಗೆ ನಮೂದಿಸಿಯಿಧೆ. ಈ ಪರಿಮಾಣವು ಗೊತ್ತಾದ್ದಲ್ಲ, ಕಾಮಗಾರಿಯು 1891ನೇ ಇಸವಿ ಸೆಪ್ಟಂಬರ್ ಆಖೈರು ವಳಗಾಗಿ ಪೂರೈಸತಕ್ಕದ್ದು.

2. ಸ್ಪರ್ಧೆ ಅಂದಾಜು ಮತ್ತು ಷರತ್ತು ಇತರ ಸಂಗತಿಗಳನ್ನು ಸಹ ದಿವಿ 11 ಘಂಟೆ ಲಾಗಾಯಿತು 5 ಘಂಟೆವರಿಗೆ ತುಮಕೂರು ಡಿವೀರ್ಜ ಯಗ್ಜಿಕ್ಯೂಟಿವ್ ಇಂಜನೀಯರ ಆಫಿಸಿನಲ್ಲಿ ನೋಡಬಹುದು.

3. ದರಖಾಸ್ತುಗಳು ಅಚ್ಚಿನ ನಮೂನೆಯಲ್ಲಿ ಯಿರಬೇಕು. ಈ ನಮೂನೆಯನ್ನು ಯಗ್ಜಿಕ್ಯೂಟಿವ್ ಇಂಜನೀಯರವರ ಆಫಿಸಿನಲ್ಲಿ ಪಡೆಯಬಹುದು, ಬಾಬುವಾರ್ ಕೆಲಸವನ್ನು ಯಾವ ಯಾವ ದರದಲ್ಲಿ ನಡೆಯಲ್ಪಡುವದೊ ಅದನ್ನು ತೋರಿಸಿ ಕೆಳಗೆ ಕೊಟ್ಟಿರುವ ಫಾರಮಿನಂತೆ ಬಂದು ಪಟ್ಟೀ ತಯಾರಿಯಿಂದ ದರಖಾಸ್ತಿನೊಡನೆ ಕಳುಹಿಸಿ ಕೊಡಬೇಕು.

4. ಪ್ರತಿ ದರಖಾಸ್ತುಗಳು ಪ್ರೊನೋಟು ಮೂಲಕವಾಗಲಿ ವ ನಗದಾಗಲಿ 200 ರೂಪಾಯಿ ಡಿಪಾಜಿಟ್ಟನ್ನ ವಡಗೂಡಿ ಯಿರಬೇಕು. ಮತ್ತು "ಪಾವಗಡ ತಾಲ್ಲೂಕು ಬೊಮ್ಮಗೋನಹಳ್ಳಿ ತಲಾವು ರಿಪೇರಿ ಕಾಮಗಾರಿ ದರಖಾಸ್ತು" ಯಂತ ಲಿಫಾಪೆ ಮೇಲೆ ಬರದು ಇರಬೇಕು. ಹೀಗೆ ಇಲ್ಲದೆ ಬರುವ ದರಖಾಸ್ತುಗಳನ್ನ ತಿರಸ್ಕರಿಸಲ್ಪಡುವದು.

5. ಪ್ರತಿ ದರಖಾಸ್ತನ್ನ ಅಂಗೀಕರಿಸತಕ್ಕದ್ದು ಚೀಫ್ ಇಂಜಿನೀಯರ್ ಸಾಹೆಬರವರದಾಗಿ ಯಿದೆ. ಅವರು ಕಮ್ಮಿ ದರ ವ ಇತರ ದರಖಾಸ್ತನ್ನು ಮಂಜೂರ್ಮಾಡುವದಕ್ಕೆ ವ ದರಖಾಸ್ತನ್ನು ಅನಂಗೀಕರಿಸುವದಕ್ಕೆ ಕಾರಣವನ್ನು ಹೇಳುವದಕ್ಕೆ ಬದ್ಧರಾಗಿ ಯಿರುವದಿಲ್ಲ.

6. ದರಖಾಸ್ತು ಮಂಜೂರ್ಮಾಡಿದ 8 ರೋಜುಗಳವಳಗಾಗಿ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಕಂಟ್ರಾಕ್ಟು ಬಾಂಡನ್ನು ಬರದುಕೊಡತಕ್ಕದ್ದು ಅವಶ್ಯಕವಾಗಿಯಿದೆ. ಹೀಗೆ ಮಾಡದಿರುವ ಸಂದರ್ಭದಲ್ಲಿ ದರಖಾಸ್ತು ರದ್ದುಆದ ಹಾಗೆ ಭಾವಿಸಲ್ಪಡುವದಲ್ಲದೆ ದರಖಾಸ್ತುದಾರನು ತನ್ನ ಡಿಪಾಜಿಟ್ ಮೊಬಲಗನ್ನ ಹೋಗಲಾಡಿಕೊಳ್ಳುವನು.

7. ಯಾರ ದರಖಾಸ್ತು ಮಂಜೂರ್ಮಾಡಲ್ಪಡುವದೋ ಅಂಥಾ ದರಖಾಸ್ತುದಾರನ ಹೆಸರನ್ನು ಯಗ್ಜಿಕ್ಯೂಟಿವ್ ಇಂಜನೀಯರವರ ಆಫಿಸ್ ನೋಟಿಸ್ ಬೋರಡಿನಲ್ಲಿ ಐಯಿಂದ ಚಿಕಟಾಯಿಸಲ್ಪಡುವದು, ದರಖಾಸ್ತು ಮಂಜೂರಾಯಿತೆ ವ ಆನಂಗೀಕರಿಸಲ್ಪಟ್ಟಿತೆ ಯಂದು ಬರುವಪ್ರಶ್ನೆಗಳಿಗೆ ಜವಾಬು ಬರಿಯಲಾರದು.

8. ದರಖಾಸ್ತುಗಳ ಪೈಕಿ ಬಂದು ದರಖಾಸ್ತು ಮಂಜೂರಾದ ಕೂಡ್ಲೆ ಅನಂಗೀಕಾರವಾದ ದರಖಾಸ್ತುಗಳ ಡಿಪಾಜಿಟ್ ಹಣವು ವಾಪಸ್ ಮಾಡಲ್ಪಡುವದು.

ಪಾವಗಡ ತಾಲ್ಲೂಕು ಬೊಮ್ಮಗೋನಹಳ್ಳಿ ತಲಾವು ರಿಪೇರಿ ಕಾಮಗಾರಿಗೋಷ್ಕಾರ ಅಂದಾಜು.

ಕೆಲಸದ ವಿವರ.	ಅಂದಾಜಿಗೆ.	ಪರಿಮಾಣ.	ದರ.	ಷರಾ.
ಯೇರಿ.				
ಯೇರಿ ವೆಡದಕಡೆ ಮಟ್ಟಿಕಾಮಗಾರಿ ..	ಸಲೆಗಜ	13572		ಕಂಟ್ರಾಕ್ಟುದಾರುಗಳು ಈ ಕೆಳಗೆ ನಮೂದು ಮಾಡಿಯಿರುವ ಕಾಮಗಾರಿಗಳಿಗೆ ದರಖಾಸ್ತಿನಲ್ಲಿ ದರಗಳು ನಮೂದು ಮಾಡಬೇಕು. 1. ಯಿಟ್ಟಿಸ್ ಮತ್ತು ಸುರಕಿ ಸುಂಣ ಕಾಮಗಾರಿ ಅಡಿ 1ಕ್ಕೆ 2. ಕಾಡಕಲ್ಲಿನಿಂದ ಷರಫ ಬಂದೀ ಕಟ್ಟುವದಕ್ಕೆ ಸಲೆಗಜ 1ಕ್ಕೆ 3. ಗಿಲಾಲ್ ಚದರಡಿ1ಕ್ಕೆ 4. ಆರು ಅಂಗುಲದ ಬಾಬತು ಚಪ್ಪಡಿ ಕಲ್ಲುಗಳು ಜಮಾಯಿಸುವದಕ್ಕೆ ದರಕಲ್ಲಿಗೆ 5. ಸಾಧಾರಣ ಜಾಗಾದಲ್ಲಿ ಮತ್ತು ಕಂತರಿ ಜಾಗಾದಲ್ಲಿ ನಾಲಾ ಖೋದಿ ಮಾಡುವದಕ್ಕೆ ಸಲೆಗಜ 1ಕ್ಕೆ
ಯೇರಿಗೆ ಮಂಣುಕಾಮಗಾರಿ ..	ಸಲೆಗಜ	74064		
ಮರಳು ತೆಗದು ನೀರುಯತ್ತುವದು ..	..	ಪೊತ್ತ ರೂಪಾಯಿ		
ಹೊಸಕಲ್ಲಿನ ಕೆಲಸ ..	ಸಲೆಗಜ	3863		
ಹಳೇಕಲ್ಲಿನ ಕೆಲಸ ..	ಸಲೆಗಜ	2646		
ಸ್ಪೈಕಲ್ಲುಗಳು ..	ಪ್ರತಿ1ಕ್ಕೆ	27		
ಬೆಬ್ಬಮಾರ್ಕ್ ಕಲ್ಲುಗಳು .	ಡಿಟೋ	2		
ತೂಬು.				
ನಂಬರು 1ನೇತೂಬು 4700ನೇ ಲೆವಲ್‌ನಲ್ಲಿ ..	..	ಪೊತ್ತ ರೂಪಾಯಿ		
ನಂಬರು 2ನೇತೂಬು 4700ನೇ ಲೆವಲ್‌ನಲ್ಲಿ ..	....			
ಕೋಡಿಯ ಪಡಿದಾರಿಗೋಡೆ ಮತ್ತು ಹಳೇಕೋಡಿಯ ಪ್ರತಿವೊಂದು ಭಾಗದಲ್ಲು ಬಂದೊಂದು ..	..	ಪೊತ್ತ ಡಿಟೋ		
ಬಲದ ಕೋಡಿ.				
ವರಸಬಂದಿ ಮತ್ತು ಷಯದಯೆಂಬಕೋಡಿ ..	..	ಪೊತ್ತ ಡಿಟೋ		
ಹಳೇದು ವರಸಬಂದೀಗೆ ರಿಪೇರಿ ..	..	ಪೊತ್ತ ಡಿಟೋ		
ಪಡದಾರಿ ಗೋಡೆಯಲ್ಲಿ ರಿಟರ್ಡಸಿಗಳು ..	..	ಪೊತ್ತ ಡಿಟೋ		
ಡಿಸ್ಟ್ರಿಬ್ಯೂಷ್ಟ್.				
ಸಾಗುವಳಿ ಕಾಲ್ವೆ ..	..			
ಹೊಸನಾಲೆಯನ್ನ ತೆಗಿಯುವದು ..	..	ಪೊತ್ತ ಡಿಟೋ		

ಎ. ಡಲಾಲ್,
ಎಗ್ಜಿಕ್ಯೂಟಿವ್ ಇಂಜನಿಯರ್.